# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **457** |
| ಉತ್ತರಿಸಬೇಕಾದ ದಿನಾಂಕ | : | 18.02.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ-ಗ್ರಾಮೀಣ (PMAY-G) ಯ ಹಂತ-II ರಲ್ಲಿ 86,000 ಮನೆಗಳನ್ನು ನಿರ್ಮಿಸಲು ಸಚಿವಾಲಯ ಪ್ರಸ್ತಾಪಿಸಿದೆ ಎಂಬುದು ಸತ್ಯವೇ; | ಹೌದು. |
| ಆ) | ಹಾಗಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು; | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) ರಡಿ 2019-20 ನೇ ಸಾಲಿಗೆ 86,000 ಮನೆಗಳ ಗುರಿಯನ್ನು ನೀಡಲಾಗಿತ್ತು. ಸದರಿ ಯೋಜನೆಯಡಿ 2011 SECC ರ ಸಮೀಕ್ಷೆಯನ್ವಯ ಲಭ್ಯವಿರುವ ವಸತಿ ರಹಿತರ ಪಟ್ಟಿಯಿಂದ ಮಾತ್ರ ಅರ್ಹ ಫಲಾನುಭವಿಗಳು ಆಯ್ಕೆ ಮಾಡಬೇಕಾಗಿರುತ್ತದೆ. ಅದರನ್ವಯ ಕೇಂದ್ರ ಸರ್ಕಾರವು 6,36,424 ವಸತಿ ರಹಿತರ ಪಟ್ಟಿಯನ್ನು ನೀಡಿದ್ದು, ಇದರಲ್ಲಿ 1,93,073 ಅರ್ಹ ಫಲಾನುಭವಿಗಳು ಕಂಡು ಬಂದಿದ್ದು, ಸದರಿಯವರಿಗೆ ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದ್ಯ PWL ಪಟ್ಟಿಯಲ್ಲಿ ಅರ್ಹ ವಸತಿ ರಹಿತರು ಲಭ್ಯವಿಲ್ಲದ ಕಾರಣ 86000 ಮನೆಗಳ ಪೈಕಿ 43733 ಮನೆಗಳ ಗುರಿಯನ್ನು ಕೇಂದ್ರ ಸರ್ಕಾರಕ್ಕೆ ಅಧ್ಯರ್ಪಣೆ ಮಾಡಲಾಗಿರುತ್ತದೆ.<br><br>ಆಯ್ಕೆಯಾದ 40694 ಫಲಾನುಭವಿ ಪೈಕಿ 6,335 ಮನೆಗಳು ಪೂರ್ಣಗೊಂಡಿದ್ದು, 13,793 ಮನೆಗಳು ಪ್ರಗತಿಯಲ್ಲಿರುತ್ತವೆ ಹಾಗೂ 20,566 ಮನೆಗಳು ಇನ್ನೂ ಪ್ರಾರಂಭವಾಗಬೇಕಿರುತ್ತದೆ. |
| ಇ) | ರಾಜ್ಯದಲ್ಲಿ ಹಂತ-I ರಲ್ಲಿ ಸಾಧಿಸಲಾದ ಗುರಿಗಳ ಸ್ಥಿತಿ ಏನು; | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) ಹಂತ-1 ಅಂದರೆ 2016-17 & 2017-18 ರಲ್ಲಿ ನೀಡಲಾದ ಗುರಿ ಹಾಗೂ ಸಾಧಿಸಲಾದ ಪ್ರಗತಿ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ) |
| ಈ) | ಹಂತ-I ರಲ್ಲಿ ಇನ್ನೂ ಕೆಲವೂ ಮನೆಗಳನ್ನು ನಿರ್ಮಿಸುವ ಯೋಜನೆ ಇದೆಯೇ; ಹಾಗಿದ್ದಲ್ಲಿ ನಿರ್ಮಾಣವು ಯಾವಾಗ ಪೂರ್ಣಗೊಳ್ಳುವ ಸಾಧ್ಯತೆಯಿದೆ ? | ಹಂತ-1 ರಲ್ಲಿ ಪ್ರಾರಂಭವಾಗದೇ ಇರುವ 21261 ಮನೆಗಳನ್ನು ಫಲಾನುಭವಿಗಳು ಪ್ರಾರಂಭಿಸದೇ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ಅಧ್ಯರ್ಪಣೆ ಮಾಡಲಾಗಿರುತ್ತದೆ. ಪ್ರಗತಿಯಲ್ಲಿರುವ 23056 ಮನೆಗಳನ್ನು ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದು, ಸದರಿ ಮನೆಗಳ ನಿರ್ಮಾಣ ಕಾರ್ಯವನ್ನು ಕೂಡಲೇ ಪೂರ್ಣಗೊಳಿಸುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಫಲಾನುಭವಿಗಳಿಗೆ ಮನವೊಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |

| ಶ್ರೇಣಿ | ಗುರಿ | ಪರಿಷ್ಕೃತ ಗುರಿ | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ರದ್ದಾದ ಮನೆಗಳು |
|---|---|---|---|---|---|
| 2016-17 | 93065 | 80272 | 66381 | 13891 | 12793 |
| 2017-18 | 52284 | 43816 | 34651 | 9165 | 8468 |
| **ಒಟ್ಟು** | **145349** | **124088** | **101032** | **23056** | **21261** |

ಸಂಖ್ಯೆ :ವಇ 42 ಹೆಚ್‌ಎಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು